**<u>3 ನೇ ಅಧಿಕ ಜಿಲ್ಲಾ ಮತ್ತ ಸತ್ರ ನ್ಯಾಯಾಲಯ, ತುಮಕೂರು.</u>**

**<u>Spl.C.431/2018</u>**

| | | |
|---|---|---|
| ಹೆಸರು | ಭರತ್ ಕುಮಾರ್ | ಪ್ರಾಸಾ.1 |
| ತಂದೆಯ ಹೆಸರು | ವೆಂಕಟೇಶ್ | ಚಾಸಾ.1 |
| ವಯಸ್ಸು | 25 ವರ್ಷ | |
| ವೃತ್ತಿ | ವಾದ್ಯಗಾರ | |
| ವಾಸಸ್ಥಳ | ಹಳೇವೂರು | |

ದಿನಾಂಕಃ **28-02-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರವರಿಂದಃ</u>

ಚಾಸಾ-2 ರಿಂದ 8 ನನಗೆ ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿಗಳು ನನಗೆ ಗೊತ್ತು. ಅವರು ನಮ್ಮ ಊರಿನವರು. ನಾನು SC ಜನಾಂಗಕ್ಕೆ ಸೇರಿದವನು. ಆರೋಪಿಗಳು ಒಕ್ಕಲಿಗ ಜನಾಂಗದವರು. ನಮ್ಮ ಊರಿನಲ್ಲಿ ಹಳೇವೂರಮ್ಮ ಗ್ರಾಮ ದೇವತೆಯ ದೇವಸ್ಥಾನವಿದೆ. ನಾನು ದೇವಾಲಯದಲ್ಲಿ ವಾದ್ಯ ನುಡಿಸುವ ಕೆಲಸವನ್ನು ಮಾಡುತ್ತೇನೆ. ದೇವಸ್ಥಾನದ ಕಾರ್ಯದರ್ಶಿಗಳು ಮತ್ತು ಊರಿನ ಗ್ರಾಮಸ್ಥರು ವೈಯಕ್ತಿಕವಾಗಿ ವಾದ್ಯ ನುಡಿಸಲು ಹೇಳುತ್ತಾರೆ. ನಾನು ನಮ್ಮ ಊರಿನಲ್ಲಿ ದೇವರ ಉತ್ಸವ ಮತ್ತು ದೇವರನ್ನು ಬೇರೆ ಊರಿಗೆ ಕರೆದುಕೊಂಡು ಹೋದಾಗ ವಾದ್ಯ ನುಡಿಸುವ ಕೆಲಸವನ್ನು ಮಾಡುತ್ತೇನೆ. ದಿನಾಂಕಃ 11-08-2018 ರಂದು ನಾನು ಬೆಂಗಳೂರಿನ ಗೊಲ್ಲರ ಹಟ್ಟಿಗೆ ಹೋಗಿದ್ದೆ, ಬೆಂಗಳೂರಿನ ಗೊಲ್ಲರ ಹಟ್ಟಿಗೆ ಟೆಂಪೋ ಮತ್ತು ಟ್ರಾಕ್ಟರ್ ನಲ್ಲಿ ಕರೆದುಕೊಂಡುಹೋಗಿದ್ದರು. ದಿನಾಂಕಃ 12-08-2018 ರಂದು ಟೆಂಪೋದಲ್ಲಿ

ವಾಪಸ್ಸು ಊರಿಗೆ ಬರುತ್ತಿದ್ದೆವು, ನಾನು ಟೆಂಪೋ ಮಲಗಿಕೊಂಡಿದ್ದಾಗ ರಾಜಪುರ ಗೇಟ್ ಬಳಿ ಊರು ಹತ್ತಿರ ಬಂತು ಎದ್ದೇಳೋ ಹೊಲೆ ಭೋಳಿ ನನ್ನ ಮಗನೆ ಎಂದು ಗಂಗಾಧರ್ ಎಂಬುವವರು ಮುಖಕ್ಕೆ ಹೊಡೆದರು. ನನ್ನ ಹಣೆಯನ್ನು ಟ್ಯಾಂಕರ್ ನ ಭಾಗಕ್ಕೆ ಗುದ್ದಿಸಿದರು, ಆಗ ನನ್ನ ಎಡಕಣ್ಣಿನ ಹತ್ತಿರ ಪೆಟ್ಟಾಯಿತು. ಆಗ 2 ನೇ ಆರೋಪಿಯು ನನ್ನನ್ನು ಜಾತಿ ನಿಂದನೆ ಮಾಡಿದರು. ನಂತರ ರಘು ಮತ್ತು ಪ್ರತಾಪ್ ಎಂಬುವವರು ಜಗಳವನ್ನು ಬಿಡಿಸಿದರು. ನಂತರ ನನ್ನನ್ನು ರಘು ಮತ್ತು ಪ್ರತಾಪ್ ಎಂಬುವವರು ಹುಲಿಯೂರು ದುರ್ಗಾ ಆಸ್ಪತ್ರೆಗೆ ಕರೆದುಕೊಂಡು ಹೋದರು. ಈ ಬಗ್ಗೆ ಊರಿನ ನ್ಯಾಯಪಂಚಾಯ್ತಿಗೆ ತಿಳಿಸಿದೆ, ಆದರೆ ಅವರು ಈ ಬಗ್ಗೆ ಏನು ಹೇಳದ ಕಾರಣ ನಾನು ಠಾಣೆಗೆ ಹೋಗಿ ದೂರನ್ನು ನೀಡಿದೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದಿನಾಂಕಃ 17-08-2018 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದರು, ಪೊಲೀಸರಿಗೆ ನಾನೇ ಘಟನಾ ಸ್ಥಳವನ್ನು ತೋರಿಸಿದೆ, ಚಾಸಾ -12 ಮತ್ತು 13 ರವರು ಘಟನಾ ಸ್ಥಳದಲ್ಲಿ ಹಾಜರಿದ್ದರು. ಸದರಿ ಮಹಜರ್ ಗೆ ಪೊಲೀಸರು ನನ್ನ ಸಹಿಯನ್ನು ಪಡೆದುಕೊಂಡರು.

ಸಾಕ್ಷಿಯು ಮಹಜರ್ ನೋಡಿ ಗುರುತಿಸಿದ್ದು, ಸದರಿ ಮಹಜರ್ ನ್ನು ನಿಪಿ-2 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಹಳೇವೂರಿನ ದೇವಸ್ಥಾನದ ಬಳಿ ಇದ್ದ ಟೆಂಪೋವನ್ನು ಪೊಲೀಸರು ವಶಕ್ಕೆ ಪಡೆದು ಮಹಜರ್ ಮಾಡಿಕೊಂಡರು. ಚಾಸಾ -12 ಮತ್ತು 13 ರವರು ಸ್ಥಳದಲ್ಲಿ ಇದ್ದರು. ಸದರಿ

ಮಹಜರ್ ಗೆ ಪೊಲೀಸರು ನನ್ನ ಸಹಿಯನ್ನು ಪಡೆದುಕೊಂಡರು.

ಸಾಕ್ಷಿಯು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಸದರಿ ಅಮಾನತ್ತು ಪಂಚನಾಮೆಯನ್ನು ನಿಪಿ-3 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಆಗ ಸಮಯ ಮಧ್ಯಾಹ್ನ 2.00 ಗಂಟೆಯಾಗಿತ್ತು. ಸದರಿ ವಾಹನದ ಸಂಖ್ಯೆ KA 02 B 7097 ಆಗಿತ್ತು. ಸದರಿ ಘಟನೆಯ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಮಹಜರ್ ಕಾಲದಲ್ಲಿ ಪೊಲೀಸರು ಸದರಿ ಘಟನಾ ಸ್ಥಳದ ಫೋಟೋವನ್ನು ತೆಗೆದರು. ಘಟನಾ ಸ್ಥಳದಲ್ಲಿ ಮತ್ತು ವಾಹನ ಅಮಾನತ್ತು ಕಾಲದಲ್ಲಿ ತೆಗೆದ ಫೋಟೋಗಳನ್ನು ನೋಡಿದರೆ ಗುರುತಿಸುವುದಾಗಿ ಸಾಕ್ಷಿಯು ನುಡಿಯುತ್ತಾರೆ.

ಸಾಕ್ಷಿಯು ಘಟನಾ ಸ್ಥಳದಲ್ಲಿ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-4 ಮತ್ತು ನಿಪಿ-5 ಎಂದು ಗುರುತಿಸಲಾಯಿತು.

ಸಾಕ್ಷಿಯು ಅಮಾನತ್ತು ಪಂಚನಾಮೆಯ ಕಾಲದಲ್ಲಿ ತೆಗೆದ ಫೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

ಸಾಕ್ಷಿಯು ಮತ್ತೊಂದು ಫೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿಗಳ ಪರ ವಕೀಲರಿಂದ: ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ರೂ.100/- ಗಳ ಖರ್ಚಿನ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತ್ತು)

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ,**

**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು.**